ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 130-133
Bi-Monthly, Peer-Reviewed, Open Access, Indexed Journal

I S S N: 2583-3510
SIRDF
J O U R N A L S
editor@srujani.in
www.srujani.in

# ಬಂಡಾಯ ಪ್ರಶ್ನೆ ಬಿಂಬಿಸುವ ಕನ್ನಡದ ಕಾದಂಬರಿಗಳು

**ಡಾ. ಕರುಣಾ ಜಮದರಖಾನಿ**
ಕನ್ನಡ ಅತಿಥಿ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರ್ಗಿ.

***Abstract:***
*ಬಂಡಾಯ ಸಾಹಿತ್ಯ 1970ರ ದಶಕದಲ್ಲಿ ಸಾಮಾಜಿಕವಾಗಿ ರಾಜಕೀಯವಾಗಿ ಜನಸಾಮಾನ್ಯರ ಬದುಕಿನಲ್ಲಿ ಬದಲಾವಣೆಗಳನ್ನು ತಂದವು. ಈ ಬದಲಾವಣೆಗಳಿಂದ ಉಂಟಾದ ಕೋಲಾಹಲದಿಂದಾಗಿ ಸಾಹಿತ್ಯದ ಮೇಲೆ ಇದರ ಪ್ರಭಾವ ಬೀರಿತು. ಅದರಿಂದಾಗಿ ಬಂಡಾಯದ ಧ್ವನಿ ಮೊಳಗಿತು ಶತಮಾನಗಳಿಂದಲೂ ಸಾಮಾಜಿಕ–ಆರ್ಥಿಕ ಶೋಷಣೆ, ಅವಮಾನ, ಕ್ರೌರ್ಯಕ್ಕೆ ಬಲಿಯಾದ ಪ್ರಜ್ಞಾವಂತ ಲೇಖಕರು ಬರೆದ ಪ್ರತಿಭಾ ಪ್ರತಿಭಟನ ಸಾಹಿತ್ಯವೇ ನಿಜವಾದ ದಲಿತ ಸಾಹಿತ್ಯವೆನಿಸಿತು. ಬಂಡಾಯ ಸಾಹಿತ್ಯ ಅದೊಂದು ಸಾಮಾಜಿಕ ಹೊಣೆಗಾರಿಕೆ. ಇಂದು ಸಮಾಜವನ್ನು ಕಿತ್ತು ತಿನ್ನುತ್ತಿರುವ ಹಾಗೂ ಸಮಾಜವನ್ನು ಅಧೋಗತಿಗೆ ತಳ್ಳಿರುವ ಯಜಮಾನ ಸಂಸ್ಕೃತಿಯ ಮುಖ್ಯ ಅಂಶಗಳಾದ ಜಾತಿ–ವರ್ಗಗಳ ವಿರುದ್ಧ; ಶೋಷಣೆಯ ವಿರುದ್ಧ ಶ್ರಮ ಜೀವಿಗಳನ್ನು ಬಂಡಾಯಕ್ಕೆ ಅನಿಗೊಳಿಸುವುದು ಬಂಡಾಯ ಸಾಹಿತ್ಯದ ಗುರಿ. ಈ ನಿಟ್ಟಿನಲ್ಲಿ ಅನೇಕ ಬಂಡಾಯ ಕಾದಂಬರಿಕಾರರು ತಮ್ಮ ಕಾದಂಬರಿಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಸೇವೆ ಸಲ್ಲಿಸಿದ್ದಾರೆ.*

***Keywords:*** *ದಲಿತ, ಬಂಡಾಯ, ಜಾತಿ ವ್ಯವಸ್ಥೆ, ಸಮಾಜ, ಶ್ರಮಜೀವಿ.*

**ಪೀಠಿಕೆ**

ಜನಪದ ಧೋರಣೆಗಳನ್ನೊಳಗೊಂಡ ಅನೇಕ ಬಂಡಾಯ ಕಾದಂಬರಿಗಳು ಕನ್ನಡದಲ್ಲಿ ದೊರೆಯುತ್ತವೆ. ಕೆಲವು ಕಾದಂಬರಿಗಳು ಬಂಡಾಯದ ಹೊರನೋಟವನ್ನು ಬೀರಿದರೆ; ಕೆಲವು ಕಾದಂಬರಿಗಳು ಬಂಡಾಯದ ಒಳನೋಟಗಳನ್ನು ಬೀರುತ್ತವೆ. ಅವುಗಳಲ್ಲಿ ಮುಖ್ಯವಾಗಿ ದೇವನೂರ ಮಹಾದೇವ, ಬರಗೂರು ರಾಮಚಂದ್ರಪ್ಪ, ಅರವಿಂದ ಮಾಲಗತ್ತಿ, ಮ.ನ.ಜವರಯ್ಯ ಮುಂತಾದ ಲೇಖಕರ ಕಾದಂಬರಿಗಳಲ್ಲಿ ದಲಿತ ಬದುಕಿನ ವಿವಿಧ ಮಜಲುಗಳನ್ನು ಪ್ರಾಮಾಣಿಕವಾಗಿ ದಾಖಲಿಸುವುದರ ಜೊತೆಗೆ ಕಲಾತ್ಮಕವಾಗಿ ಚಿತ್ರಿಸಿದ್ದಾರೆ.

**ವಿಷಯ ಮಂಡನೆ**

ದೇವನೂರ ಮಹದೇವ ಅವರ ಒಡಲಾಳ, ಕುಸುಮಬಾಲೆ, ಮನಜ ಅವರ 'ಮಾಗಿ' ಮಾಲಗತ್ತಿಯವರ 'ಕಾರ್ಯ' ದಲಿತ ಬದುಕಿನ ಪ್ರಾಮಾಣಿಕ ದಾಖಲೆಗಳಾಗಿವೆ.

ಒಡಲಾಳದ ಸಾಕವ್ವ ಮಾಗಿಯ ಮಾಗವ್ವ ಮತ್ತು ಕಾರ್ಯದ ಬಂಗಾರವ್ವ ಈ ಪಾತ್ರಗಳು ಕನ್ನಡದ ಮಹತ್ವದ ಕೊಡುಗೆಗಳಾಗಿವೆ. ಸಾಕವ್ವ, ಮಾಗವ್ವ ಅಂಥವರ ವರ್ತಮಾನದ ಬದುಕಿನಲ್ಲಿ ನೋವು, ಶೋಷಣೆ ಇದ್ದರೆ, ಬಂಗಾರವ್ವನ ಬದುಕಿನಲ್ಲಿ ಅದೇ ನೋವು ಶೋಷಣೆ ಕಾಣಿಸುತ್ತದೆ. ಸಾಕವ್ವ, ಮಾಗವ್ವ

***Please cite this article as:*** ಕರುಣಾ ಜಮದರಖಾನಿ. (2024). ಬಂಡಾಯ ಪ್ರಶ್ನೆ ಬಿಂಬಿಸುವ ಕನ್ನಡದ ಕಾದಂಬರಿಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 3(4), 130–133

ಬದುಕುವುದರ ಮೂಲಕ ಈ ಕರಾಳ ವ್ಯವಸ್ಥೆಯನ್ನು ಪ್ರಶ್ನಿಸಿದರೆ, ಬಂಗಾರವ್ವ ಸಾಯುವುದರ ಮೂಲಕ ಕ್ರೂರ ವ್ಯವಸ್ಥೆಗೆ ಸವಾಲಾಗುತ್ತಾಳೆ.

ಈ ಮೂರು ಕಾದಂಬರಿಗಳಲ್ಲಿ ಘೋಷಿತ ನಿಲುವುಗಳಿಲ್ಲ. ಬದುಕಿನ ಸತ್ಯಗಳಿವೆ. ಕೇವಲ ಸದ್ದಿರದ ಸತ್ವವಿದೆ. ಆದರ್ಶ ಸಂದೇಶ ಸಾರುವ ಗೊಂದಲವಿರದೆ ವರ್ತಮಾನದ ವಾಸ್ತವತೆ ಇದೆ. ಸಾಹಿತ್ಯ ಕೃತಿ ಯೊಂದರ ಮೂಲಕ ಸಿಗಬಹುದಾದ ಸಂತೋಷ ಕುತೂಹಲಗಳನ್ನು ಉಳಿಸಿಕೊಂಡೇ ಈ ಕೃತಿಗಳು ಕ್ರೂರ ವ್ಯವಸ್ಥೆಗೆ ಸವಾಲಾಗಿ ನಿಲ್ಲುವ ಶಕ್ತಿಯನ್ನು ಪಡೆದಿವೆ.

ಗ್ರಾಮೀಣ ಬದುಕಿನ ಅನೇಕ ಪರಿಚಿತ ಮಜಲುಗಳನ್ನ ಪ್ರಥಮ ಬಾರಿಗೆ ಪ್ರಕಟಿಸುವುದರ ಮೂಲಕ ಬಂಡಾಯ ಕಾದಂಬರಿಗಳನ್ನು ಜನಪರ ಆಶಯಗಳ ಬೆಳವಣಿಗೆಗಾಗಿ ದುಡಿಸಿಕೊಂಡಿದ್ದಾರೆ. ಬರಗೂರು ರಾಮಚಂದ್ರಪ್ಪನವರ ಒಂದು ಊರಿನ ಕಥೆ; ಬೆಂಕಿ; ಉಕ್ಕಿನ ಕೋಟೆ; ಭರತನಗರಿ; ಸೂರ್ಯ ಕಾದಂಬರಿಗಳು ಕುಂ.ವೀರಭದ್ರಪ್ಪನವರ ಕಪ್ಪು ಕೆಂಡದ ಮಳೆ; ಒಂದು ಹೆಣ್ಣಿನ ಒಳ ಜಗತ್ತು; ಹುಲಿಗೆಮ್ಮ ಕೃತಿಗಳು

ದೊರೆ ಸ್ವಾಮಿಯವರ ಕೊಳೆ; ಕಾ.ತ.ಚಿಕ್ಕಣ್ಣನವರ ಮುಂಜಾವು; ಬೆನಕನಹಳ್ಳಿ ನಾಯಕ ಅವರ ತಾಂಡಾಯಣ; ದೆವ್ವ ಮತ್ತು ಕಾಮು; ಬುಡುಕ್ಯ ಮತ್ತು ಸಂತ್ರಿ ಈ ಮುಂತಾದ ಕಾದಂಬರಿಗಳಲ್ಲಿ ಗ್ರಾಮೀಣ ಬದುಕಿನ ವಾಸ್ತವಗಳು ಉಳಿಗಮಾನ್ಯ ಸಂಸ್ಕೃತಿಯ ಜನ ವಿರೋಧಿ ನಿಲುವುಗಳು ಏಕಕಾಲಕ್ಕೆ ಪ್ರಕಟಗೊಂಡು ಓದುಗರ ಅರಿವನ್ನು ಆಲೋಚನೆಯನ್ನು ಹೆಚ್ಚಿಸುವುದರ ಮೂಲಕ ಜನಪರ ನಿಲುವುಗಳನ್ನು ಸ್ಥಾಪಿಸುತ್ತವೆ.

ಒಂದು ಊರಿನ ಕಥೆ; ಬೆಂಕಿ; ಮತ್ತು ಸೂರ್ಯ ಕಾದಂಬರಿಗಳಲ್ಲಿ ಬರಗೂರು ಅವರು ಗ್ರಾಮೀಣ ಬದುಕಿನ ವಿವಿಧ ಸ್ಥಳಗಳನ್ನ ವಾಸ್ತವವಾಗಿ ದಾಖಲಿಸುತ್ತಾ ಹೊಸ ಆಲೋಚನಾ ಕ್ರಮವನ್ನು ರೂಪಿಸುತ್ತಾರೆ ಬೆಂಕಿ ಮತ್ತು ಸೂರ್ಯ ಕಾದಂಬರಿಯ ನಾಯಕಿಯರು ಶತಮಾನಗಳಿಂದ ತಮ್ಮ ಮೇಲಾಗುತ್ತಿರುವ ಶೋಷಣೆಯ ವಿರುದ್ಧ ಪುರುಷ ಪ್ರಧಾನ ಸಂಸ್ಕೃತಿಯ ಅಸಮಾನತೆಯ ವಿರುದ್ಧ ಬಂಡೇಳುತ್ತಾರೆ. ಬರಗೂರರ ಕಾದಂಬರಿಗಳಲ್ಲಿ ಬರುವ ಗೌಡ ನಪುಂಸಕನಾಗಿ ಹೆಣ್ಣು ಮಕ್ಕಳನ್ನು ಹಿಂಸಿಸಿದರೆ; ಕುಂ.ವೀರಭದ್ರಪ್ಪನವರ ಕಾದಂಬರಿಗಳಲ್ಲಿ ಬರುವ ಗೌಡ ಕಾಮುಕನಾಗಿ ಕಾಡುತ್ತಾನೆ. ಊಳಿಗಮಾನ್ಯ ಸಂಸ್ಕೃತಿಯ ಪ್ರತೀಕವಾಗಿರುವ ಗೌಡ ಕುಂ.ವಿ.ಕಾದಂಬರಿಗಳಲ್ಲಿ ಶತಮಾನಗಳ ಶೋಷಣೆಯನ್ನು ವಾರಸುದಾರನಂತೆ ಕಾಣುತ್ತಾನೆ.

ಗ್ರಾಮೀಣ ಬದುಕಿನ ಅಸಮಾನತೆಯ ಬದುಕಿಗೆ ಅಲ್ಲಿಯ ಕ್ರೌರ್ಯ ಹತಾಶೆಗಳಿಗೆ, ದರ್ಪ ಅಹಂಕಾರಗಳಿಗೆ ಜಾತೀಯತೆ ಸಣ್ಣತನಗಳಿಗೆ ಈ ಗೌಡ ಕಾರಣನಾಗುತ್ತಾನೆ.

ಕು.ವೀರಭದ್ರಪ್ಪನವರ 'ಕಪ್ಪು' ಕಾದಂಬರಿ ಜನಪರ ಆಶಯಗಳನ್ನು ದಾಖಲಿಸುವ ಮಹತ್ವವಾದ ಕೃತಿ ಬಂಡಾಯ ಕೃತಿಗಳ ಒಟ್ಟು ಪ್ರತಿನಿಧಿಯಂತಿರುವ ಈ ಕಾದಂಬರಿ ಮಾಡಬಹುದಾದ ಪರಿಣಾಮ ತುಂಬಾ ತೀವ್ರತರವಾದದ್ದು. ಕುಂ.ವಿ ಅವರ ಮೊದಲ ಕಾದಂಬರಿ ಇದಾದರೂ ಊಳಿಗಮಾನ್ಯ ಸಂಸ್ಕೃತಿಯ ನೈಜ ದಾಖಲೆಗೆ ಇಂದಿಗೂ ಕೂಡ ಇದನ್ನೇ ಹೆಸರಿಸಬಹುದಾಗಿದೆ. ಬಂಡಾಯದ ಪ್ರಖರತೆಯಲ್ಲಿಯೇ ಇಲ್ಲಿ ಮುಗ್ಧತೆಯ ಕನಸುಗಳು ಉರಿವ ಕೆಂಡದ ನಡುವೆ ಪಲ್ಲವಿಸಬಹುದಾದ ಆಶಯವು ಇಲ್ಲಿದೆ. ಕಾಗೆ ಗೂಬೆಗಳ ನಡುವೆ ಕೋಗಿಲೆಯ ಸ್ವರಕ್ಕಾಗಿ ಹುಡುಕಾಟ ನಡೆದಿದೆ. ಬಂಡಾಯದ ಅನೇಕ ಸಂಗತಿಗಳನ್ನು ಜನಪರ ನಿಲುವಿನ ಅನೇಕ ಮಗ್ಗಲುಗಳನ್ನು ದಾಖಲಿಸಿದ್ದಾರೆ. ಇಲ್ಲಿಯ ಕಥಾ ನಾಯಕಿ ಗೌರಿಯ ಅಸಹಾಯಕ ಸ್ಥಿತಿಯನ್ನು ಇಡೀ ಸಮಾಜದ ವ್ಯವಸ್ಥೆಯಲ್ಲಿರುವ ಮುಗ್ಧ ಜನತೆಯ ಅಸಹಾಯಕ ಸ್ಥಿತಿಯ ಪ್ರತೀಕವಾಗಿದ್ದಾಳೆ.

ಕರಿಗೌಡ ಮತ್ತು ಸಣ್ಣ ರುದ್ರರಂತಹ ಶೋಷಕ ಶಕ್ತಿಗಳ ವಿರುದ್ಧ ಇಲ್ಲಿ ಘೋಷಣಾತ್ಮಕ ಬಂಡಾಯವಿರದೆ ಓದುಗರ ಆಲೋಚನೆಯನ್ನು ತಿಕ್ಕಿ ಜಳಪಿಸುವ ಅರಿವಿನ ಸ್ಫೋಟವಿದೆ.

ಹಳ್ಳಿಗಾಡಿನ ಗಾಢ ಅನುಭವಗಳನ್ನು ಅಲ್ಲಿಯ ಮೌಢ್ಯತೆ ಅಂಧ ಸಂಪ್ರದಾಯಗಳನ್ನ ಭಯಭೀತಿಗಳನ್ನ ಉತ್ಸಾಹ ಪ್ರೀತಿಗಳನ್ನ ನೈಜವಾಗಿ ಕಟ್ಟಿಕೊಡುತ್ತಾ ಬಂಡಾಯದ ಲೇಖಕರು ಸಮಾನತೆಗಾಗಿ ಹೊಸ ವ್ಯವಸ್ಥೆಗಾಗಿ ತುಡಿಯುತ್ತಿರುವ ಕಾಳಜಿಯು ಬಹಳ ಗಮನಾರ್ಹವಾಗಿದೆ. ಬಂಡಾಯ ಚಳುವಳಿಯು ಪ್ರಾರಂಭವಾಗುವುದಕ್ಕಿಂತ ಮೊದಲು ಗ್ರಾಮೀಣ ಬದುಕಿನ ಅನುಭವಗಳು ಇತರ ಕಾದಂಬರಿಗಳಲ್ಲಿ ಬಂದಿಲ್ಲವೆಂದಲ್ಲ, ಆದರೆ ಒಂದು ಹಳ್ಳಿಯ ಬದುಕನ್ನು ಅಲ್ಲಿಯ ನಂಬಿಕೆಗಳನ್ನು ಆಚರಣೆಗಳನ್ನು ವ್ಯವಹಾರವನ್ನ ಸಂಬಂಧಗಳನ್ನು ನೋಡುವ ದೃಷ್ಟಿಕೋನವೇ ತುಂಬಾ ವಿಭಿನ್ನವಾಗಿದೆ. ಹಳ್ಳಿಗಾಡಿನ ಚಿತ್ರಣ ಕೇವಲ ವರ್ಣನಾತ್ಮಕ ನೆಲೆಯಲ್ಲಿ ಕರಗಿ ಹೋಗದೆ, ಜ್ವಲಂತ ಸಮಸ್ಯೆಗಳಿಂದ ಕೆಂಡವಾಗಿ ಕೃತಿಗಳಲ್ಲಿ ಕಂಡುಬರುತ್ತದೆ.

ದಲಿತ ಬದುಕಿನ ಅನೇಕ ಸೂಕ್ಷ್ಮ ಸಂಗತಿಗಳನ್ನು ಕಟ್ಟಿಕೊಟ್ಟ ಬಂಡಾಯ ಲೇಖಕರು ಮುಸ್ಲಿಂ ಬದುಕಿನ ಅನೇಕ ಗೂಢತೆಗಳನ್ನು ಮೊದಲ ಬಾರಿಗೆ ಪ್ರಕಟಿಸಿದ್ದಾರೆ. ಅದೇ ಸಾಲಿನಲ್ಲಿ ಬರುವ ಸಾರಾ ಅಬೂಬಕರ್, ಬೋಳುವಾರು ಮಹಮ್ಮದ್ ಕುಂಞ, ಫಕೀರ ಕಟ್ಪಾಡಿ, ಅಬ್ದುಲ್ ಮಜೀದ್ ಖಾನ್, ಅಸಫಲಿ ಮುಜಾವರ್, ಭಾನು ಮುಸ್ತಾಕ್ ಈ ಮೊದಲಾದ ಬಂಡಾಯದ ಲೇಖಕರು ತಮ್ಮ ಅನುಭವಗಳನ್ನು ಸಾಮಾಜಿಕ ಕಾಳಜಿಗಳ ನೆಲೆಯಲ್ಲಿ ಗುರುತಿಸಿದ್ದಾರೆ.

ಕನ್ನಡ ಕಾದಂಬರಿ ಸಾಹಿತ್ಯಕ್ಕೆ ಮುಸ್ಲಿಂ ಬದುಕಿನ ಸಂವೇದನೆಗಳನ್ನು ಮೂಡಿಸುವ ಈ ಲೇಖಕರ ಕೃತಿಗಳು ಬಹಳಷ್ಟು ಗಮನ ಸೆಳೆಯುತ್ತವೆ. ಸಾರಾ ಹಾಗೂ ಕಟ್ಪಾಡಿ ಅವರು ಮುಸ್ಲಿಂ ಜನಾಂಗದ ಬದುಕನ್ನು ತಮ್ಮ ಕಾದಂಬರಿಗಳಲ್ಲಿ ವಿಶ್ಲೇಷಿಸಿದ್ದರೆ;

ಬೋಳುವಾರು ಮಾತ್ರ ಮುಸ್ಲಿಂ ಬದುಕಿನ ಸಂಬಂಧಗಳನ್ನು ಬೇರೆ ಸಂಸ್ಕೃತಿಗಳ ನೆಲೆಯಲ್ಲಿ ತೌಲನಿಕವಾಗಿ ಗುರುತಿಸಲು ಪ್ರಯತ್ನಿಸುತ್ತಾರೆ. ಸಾರಾ ಅಬೂಬ್ಕರ್ ರವರು ಜನಾಂಗದ ಮೌಢ್ಯತೆ ಸಣ್ಣತನಗಳನ್ನು ಹೇಳುತ್ತಲೇ ನಶಿಮಾಳಂತಹ ಪಾತ್ರಗಳ ಮೂಲಕ ಬಂಡಾಯ ಗುಣಗಳನ್ನು ಹುಟ್ಟಿಸಿ ಜನಪರ ಆಶಯ ಪ್ರಕಟಿಸಿದರೆ, ಕಟ್ಪಾಡಿಯವರು ಯಾವುದೇ ತೀರ್ಪನ್ನು ಕೊಡದೆ ಯಥಾಸ್ಥಿತಿಯನ್ನು ತೆರೆದು ತೋರಿಸುತ್ತಾರೆ. ಇದರ ಮೂಲಕ ತೀವ್ರತರವಾದ ಪರಿಣಾಮವನ್ನುಂಟು ಮಾಡುವ ಅನಂತಮೂರ್ತಿಯವರ ಸಂಸ್ಕಾರ, ಘಟಶ್ರಾದ್ಧಗಳಂತೆ ಇವರ ಕೃತಿಗಳು ಮುಸ್ಲಿಂ ಜನಾಂಗದ ಒಳನೋಟಗಳನ್ನು ಯಥಾವತ್ತಾಗಿ ತೆರದಿಡುತ್ತವೆ. ಬೋಳುವಾರು ಇದಕ್ಕಿಂತ ಸ್ವಲ್ಪ ವಿಭಿನ್ನವಾಗಿ ಬರೆಯುತ್ತಾ ತಮ್ಮ ವಿನೋದದ ಶೈಲಿಯಲ್ಲಿ ಈ ಸಮಾಜ ವ್ಯವಸ್ಥೆಯ ಕ್ರೌರ್ಯವನ್ನು ಬಿಡಿಸಿ ಹೇಳುತ್ತಾರೆ. ವಿಭಿನ್ನ ಸಂಸ್ಕೃತಿಯ ವ್ಯಕ್ತಿಗಳ ಸಂಘರ್ಷದೊಂದಿಗೆ ಮನುಷ್ಯ ಚೇತನದ ಸಾಧ್ಯತೆಗಳನ್ನು ತೆರೆದಿಡುತ್ತಾರೆ.

ಪೂರ್ಣಚಂದ್ರ ತೇಜಸ್ವಿಯವರ ಕರ್ವಾಲೋ, ಚಿದಂಬರ ರಹಸ್ಯ., ವೀಣಾ ಶಾಂತೇಶ್ವರವರ ಶೋಷಣೆ, ಬಂಡಾಯ ಇತ್ಯಾದಿ, ವ್ಯಾಸರಾಯ ಬಲ್ಲಾಳರ ಬಂಡಾಯ, ಶ್ರೀ ಕೃಷ್ಣ ಆಲನಹಳ್ಳಿ ಅವರ 'ಭುಜಂಗಯ್ಯನ ದಶಾವತಾರಗಳು; ಅನುಪಮ ನಿರಂಜನರ 'ಆಳ' ಈ ಮೊದಲಾದ ಕಾದಂಬರಿಗಳಲ್ಲಿ ಜನಪರ ಆಶಯ ಸಮರ್ಥವಾಗಿ ಪ್ರಕಟವಾಗಿದವೆ. ಪತ್ತೇದಾರಿ ತಂತ್ರವನ್ನು ಬಳಸಿಕೊಂಡು ವಿನೋದ ಶೈಲಿಯಲ್ಲಿ ತೇಜಸ್ವಿಯವರು 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಜನ ಸಮೂಹ ಪರವಾದ ನಿಲುವುಗಳಲ್ಲಿ ಪ್ರಕಟಿಸಿದರೆ ಬಲ್ಲಾಳರ 'ಬಂಡಾಯ' ಕಾರ್ಮಿಕ ಬದುಕಿನ ಒಳನೋಟಗಳನ್ನು ದಾಖಲಿಸುತ್ತದೆ.

ಚಿತ್ತಾಲರ 'ಪುರುಷೋತ್ತಮ; ಇದಕ್ಕೆ ಭಿನ್ನವಾದ ಆಲೋಚನಾ ಕ್ರಮವನ್ನು ಕಟ್ಟಿಕೊಡುವುದರ ಮೂಲಕ

ಜನಪರತೆಯ ಸೂಕ್ಷ್ಮ ಸಂಗತಿಗಳನ್ನು ಸೂಚಿಸುತ್ತದೆ. ಶಾಂತರಸರ ಸಣ್ಣ ಗೌಡ ಶಾಣಿ; ಚಂದ್ರಕಾಂತ್ ಕುಸುನೂರ್ ಅವರ ನೂರ್ ಜಹಾನ್; ಆಲನಹಳ್ಳಿ ಅವರ ದಶಾವತಾರಗಳು ಗ್ರಾಮೀಣ ಬದುಕಿನ ಜೀವಂತ ದಾಖಲೆಗಳಾಗಿವೆ.

ಅನುಪಮಾ ನಿರಂಜನ ಅವರ 'ಆಳ' ಕಾದಂಬರಿಯು ಮಹಿಳಾ ವಿಮೋಚನೆಯ ಮತ್ತೊಂದು ಹಂತವನ್ನು ಹೇಳುತ್ತದೆ.

ಚದುರಂಗರ ಹೆಜ್ಜಾಲ ಮತ್ತು ಕುಂ. ವೀರಭದ್ರಪ್ಪನವರ 'ಶಾಮಣ್ಣ' ಮಹತ್ವದ ಕಾದಂಬರಿಗಳಾಗಿವೆ. ಇದೇ ಸಂದರ್ಭದಲ್ಲಿ ಪ್ರಕಟವಾದ ಬಂಡಾಯ ಲೇಖಕಿಯರ ಸಂವೇದನೆಗಳನ್ನು ಇಲ್ಲಿ ಮರೆಯುವಂತಿಲ್ಲ.

ಬಿ.ಟಿ.ಲಲಿತ ನಾಯಕ ಅವರ ನೆಲೆಬೆಲೆ, ಗತಿ, ಚಕ್ಕಿಯ ಹರೆಯದ ದಿನಗಳು, ಹಸಿ ಮಾಂಸ ಮತ್ತು ಹದ್ದುಗಳು, ನೀಲಗಂಗಾ ಕೃತಿಗಳು, ವೀಣಾ ಶಾಂತೇಶ್ವರರ ಶೋಷಣೆ, ಬಂಡಾಯ ಇತ್ಯಾದಿ, ಸಾರಾ ಅಬೂಕ್ಕರ್‌ರವರ ಚಂದ್ರಗಿರಿಯ ತೀರದಲ್ಲಿ, ಸಹನ ಕೃತಿಗಳು ಮಹಿಳಾ ಸಂವೇದನೆಗಳನ್ನು ಸತ್ವಯುತವಾಗಿ ವಿಶ್ಲೇಷಿಸುತ್ತವೆ. ದೇವನೂರರ 'ಸಾಕವ್ವ' ಮ.ನ.ಜ ಅವರ 'ಮಾಗವ್ವ 'ದಂತಹ ಸ್ತ್ರೀ ಪಾತ್ರಗಳು ಸೃಷ್ಟಿಯಾದಂತೆ ಸಾರಾ ಅವರು 'ನಸಿಮ' ಗೀತಾ ನಾಗಭೂಷಣ್ ಅವರ 'ಲಚ್ಚಿ' ಅಂತ ಪಾತ್ರಗಳು ಹಸಿರಾಗಿ ಉಳಿಯುತ್ತವೆ. ಈ ಸಾಹಿತ್ಯ ಪರಂಪರೆಯನ್ನು ಒಟ್ಟಾಗಿ ವಿರೋಧಿಸುವುದಿಲ್ಲವಾದರೂ ಸಂಪ್ರದಾಯದ ಸ್ಥಗಿತತೆಯನ್ನು ಮಾನವ ವಿರೋಧಿ ನೀತಿಯನ್ನು ವಿರೋಧಿಸುತ್ತವೆ. ಪರಂಪರೆಯ ಜೊತೆಗೆ ಸಂಬಂಧ ಮತ್ತು ಮುಂದುವರಿಕೆ ಬಂಡಾಯದ ನಿಲುವಾಗಿದೆ.

ಇಷ್ಟಾಗಿಯೂ ಈ ಸಾಹಿತ್ಯ ಯಾವೊಬ್ಬ ನಿರ್ದಿಷ್ಟ ವ್ಯಕ್ತಿಯ ಸಿದ್ಧಾಂತಗಳನ್ನ ನೆಚ್ಚಿನಂತಿಲ್ಲವೆಂದು ಹೇಳಲಾಗಿದೆ. ಕಾರ್ಲ್‌ಮಾರ್ಕ್ಸ್, ಲೋಹಿಯಾ, ರಾಮಸ್ವಾಮಿ ನಾಯ್ಕರ್ ಅಂಬೇಡ್ಕರ್, ನಾರಾಯಣ ಗುರು ಮುಂತಾದ ಮಹನೀಯರ ಸಿದ್ಧಾಂತಗಳು ಬಂಡಾಯ ಸಾಹಿತ್ಯದ ವ್ಯಕ್ತಿ ಶಕ್ತಿಗಳಾಗಿದ್ದಾರೆ.

**ಪರಮರ್ಶನ ಗ್ರಂಥಗಳು**


- ಬಸವರಾಜ ಸಬರದ. (1997). *ಬಂಡಾಯ ಕಾವ್ಯ ಮತ್ತು ಜಾನಪದ.* ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.
- ಬಸವರಾಜ ಸಬರದ. (2001). *ಬಂಡಾಯ ಸಾಹಿತ್ಯ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಬಸವರಾಜ ಸಬರದ. (2013). *ಸಾಹಿತ್ಯ ಸಿಂಚನ.* ಪಲ್ಲವಿ ಪ್ರಕಾಶನ.
- ಪುರುಷೋತ್ತಮ್ ಬಿಳಿಮಲೆ. (2017). *ಬಂಡಾಯ–ದಲಿತ ಚಳುವಳಿ ಮತ್ತು ಸಾಹಿತ್ಯ.* ಅಭಿನವ ಪ್ರಕಾಶನ.
- ಶೇಷಗಿರಿ ರಾವ್, ಎಲ್.ಎಸ್. (2009). ಹೊಸಗನ್ನಡ ಸಾಹಿತ್ಯ ಚರಿತ್ರೆ, ಸಪ್ನ ಬುಕ್ ಹೌಸ್
- ಸರಜೂ ಕಾಟ್ಕರ್. (2012). ಕನ್ನಡ ಬಂಡಾಯ ಸಾಹಿತ್ಯ. ಸಾಹಿತ್ಯ ಅಕಾಡೆಮಿ.